**ದಿನಾಂಕ 26-2-2020 ರಂದು ಸಂಜೆ 4.30 ಗಂಟೆಗೆ ಕೊಠಡಿ ಸಂ. 252, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 43ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | |
|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, | ಸದಸ್ಯರು |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು |
| 4. | ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ | ಸದಸ್ಯರು |
| 5. | ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ | ಸದಸ್ಯರು |
| 6. | ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ | ಸದಸ್ಯರು |
| 7. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು |
| 8. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಿಗೆ, ಘನತೆವೆತ್ತ ರಾಜ್ಯಪಾಲರಿಂದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಗೆ ನೂತನವಾಗಿ ನೇಮಕ ಹೊಂದಿದ ಶ್ರೀ. ತ್ರಿವಿಕ್ರಮ ಜೋಶಿ ಇವರನ್ನು ಪರಿಚಯಿಸುತ್ತಾ, ಸ್ವಾಗತ ಕೋರಿದರು ಹಾಗೂ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ-1 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಯ ಮತ್ತು ದಿನಾಂಕ 1-2-2020 ರ ಪರಿಚಲನಾ ಕಾರ್ಯಸೂಚಿಯ ನಡವಳಿಗಳನ್ನು ಸ್ಥಿರೀಕರಿಸುವುದು.**<br><br>**ಠರಾವು:**<br>ದಿನಾಂಕ 20-11-2019, ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಯ ಮತ್ತು ದಿನಾಂಕ 1-2-2020 ರ ಪರಿಚಲನಾ ಕಾರ್ಯಸೂಚಿಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.<br><br>**(ಕ್ರಮ : ಕುಲಸಚಿವರು)** |
| ಐಟಂ-2 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಯ ನಡವಳಿಗಳ ಮೇಲೆ ದಿನಾಂಕ 1-2-2020 ರ ಪರಿಚಲನಾ ಕಾರ್ಯಸೂಚಿಯ ನಡವಳಿಗಳನುಸಾರ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br><br>**ಠರಾವು:**<br>ದಿನಾಂಕ 20-11-2019, ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಯ ಮತ್ತು ದಿನಾಂಕ 1-2-2020 ರ ಪರಿಚಲನಾ ಕಾರ್ಯಸೂಚಿಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br><br>**(ಕ್ರಮ : ಕುಲಸಚಿವರು)** |

**ಐಟಂ–3** **ವಲಯ ಕೃಷಿ ಸಂಶೋಧನಾ ಕೇಂದ್ರ ಕಲಬುರಗಿಯಲ್ಲಿ ಉತ್ಪಾದಿಸುವ ಪಲ್ಸ್ ಹಾಗೂ ಚಿಕ್–ಪೀ ಮ್ಯಾಜಿಕನ ಮಾರಾಟದಿಂದ ಬರುವ ಮೊತ್ತದಲ್ಲಿ ಶೇ 8% ರಷ್ಟು ಮಾರಾಟ ಮಾಡುವರವರಿಗೆ ಪ್ರೋತ್ಸಾಹ ಧನ ನೀಡಲು ಅನುಮತಿ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಯಲ್ಲಿ ಉತ್ಪಾದಿಸುವ ಪಲ್ಸ್ ಹಾಗೂ ಚಿಕ್–ಪೀ ಮ್ಯಾಜಿಕ್ ಉತ್ಪಾದನೆಯನ್ನು ವಿಶ್ವವಿದ್ಯಾಲಯದ ಅಧೀನದ ವಿವಿಧ ಕೇಂದ್ರಗಳು ಮತ್ತು ಕೃಷಿ ಇಲಾಖೆಯ ಸಹಯೋಗದೊಂದಿಗೆ ಮಾಡುವ ಮಾರಾಟಕ್ಕೆ ಶೇ. 5 ರಷ್ಟು ಪ್ರೆತ್ಸಾಹ ಧನ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಸಂಶೋಧನಾ ನಿರ್ದೇಶಕರು / ವಲಯ ಸಹ ಸಂಶೋಧನಾ ನಿರ್ದೇಶಕರು, ಕಲಬುರಗಿ )**

**ಐಟಂ–4** **ಕಲಬುರಗಿ ಜಿಲ್ಲೆಯ ಚಿಂಚೋಳಿಯಲ್ಲಿ ನೂತನ ಕೃಷಿ ವಿಸ್ತರಣಾ ಕೇಂದ್ರ ಸ್ಥಾಪನೆ ಮಾಡುವ ಪ್ರಸ್ತಾವನೆಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಪ್ರಥಮವಾಗಿ, ಸದರಿ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರದ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾದ ಪರಿಣಿತಿ ಸಮಿತಿಗೆ ಸಲ್ಲಿಸುವಂತೆ ಹಾಗೂ ಸದರಿ ಸಮಿತಿಯ ಶಿಫಾರಸ್ಸನ್ನು ಮುಂದಿನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ನಿರ್ಣಯಿಸಲಾಯಿತು.

**(ಕ್ರಮ : ಕುಲಸಚಿವರು)**

**ಐಟಂ–5** **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು:**

ರೂ. 10.00 ಲಕ್ಷಕ್ಕಿಂತ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣದಲ್ಲಿ ಹಾಗೂ ಇತರೆ ಆವರಣಗಳಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು :

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ.) ಲಕ್ಷಗಳಲ್ಲಿ | ಅನುದಾನ ವಿವರ |
|---|---|---|---|
| | **ಕೃ.ವಿ.ವಿ. ರಾಯಚೂರು.** | | |
| 1 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರ ಆವರಣದ ಮುಖ್ಯ ರಸ್ತೆಯ ಡಾಂಬರೀಕರಣ ಮತ್ತು ಸಂಬಂಧಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು. | 76.98 | ಕೃ. ವಿ. ವಿ. ಅನುದಾನ |
| 2 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರ ಆವರಣದ ವಸತಿಗೃಹಗಳ ರಸ್ತೆಗಳನ್ನು ಉನ್ನತ್ತೀಕರಣಗೊಳಿಸುವ ಮತ್ತು ರಸ್ತೆ ಪಕ್ಕದ ಚರಂಡಿಗಳನ್ನು ನಿರ್ಮಿಸುವ ಕೆಲಸ. | 48.50 | ಕೃ. ವಿ. ವಿ. ಅನುದಾನ |
| 3 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರ ಆವರಣದ 'ಇ'–ಮಾದರಿಯ ವಸತಿಗೃಹಗಳಿಗೆ ಬಿ.ಟಿ.ರಸ್ತೆ ನಿರ್ಮಿಸುವ ಕೆಲಸ. | 12.12 | ಕೃ. ವಿ. ವಿ. ಅನುದಾನ |
| 4 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರ ಆವರಣದ ಪ್ರಕೃತಿ ವಸತಿನಿಲಯದ ಹಿಂದಿನ ಭಾಗದ ರಾಂಪೂರ ರಸ್ತೆಯಗುಂಟ ಕಂಪೌಂಡ ಗೋಡೆ ನಿರ್ಮಿಸುವ ಕೆಲಸ. | 33.75 | ಕೃ. ವಿ. ವಿ. ಅನುದಾನ |

| | | | |
|---|---|---|---|
| 5 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರ ಆವರಣದ ಹೊಸ ಬಾಲಕಿಯರ ವಸತಿನಿಲಯದ ಸುತ್ತಲೂ ಕಂಪೌಂಡ ಗೋಡೆ ನಿರ್ಮಿಸುವ ಕೆಲಸ. | 16.40 | ಕೃ. ವಿ. ವಿ. ಅನುದಾನ |
| | **ಕೃಷಿ ಸಂಶೋಧನಾ ಕೇಂದ್ರ ಮಾಳನೂರ ಆವರಣ.** | | |
| 6 | ಕೃಷಿ ಸಂಶೋಧನಾ ಕೇಂದ್ರ ಮಾಳನೂರಿನಲ್ಲಿ ದನಗಳ ಕೊಟ್ಟಿಗೆಯನ್ನು ನಿರ್ಮಿಸುವ ಕೆಲಸ. | 16.60 | ಕೃ. ವಿ. ವಿ. ಅನುದಾನ |
| | **ಕೃಷಿ ಮಹಾವಿದ್ಯಾಲಯ ಕಲಬುರ್ಗಿ ಆವರಣ.** | | |
| 7 | ವಲಯ ಕೃಷಿ ಸಂಶೋಧನಾ ಕೇಂದ್ರ ಕಲಬುರ್ಗಿ ಕಛೇರಿಯ ನೆಲಮಹಡಿಯ ವಿದ್ಯುತ್ ಜಾಲದ ರಿಪೇರಿ ಮತ್ತು ನವೀಕರಣ ಕೆಲಸ. | 13.90 | ಕೃ.ವಿ.ವಿ. ಅನುದಾನ |

**(ಕ್ರಮ : ಆಸ್ತಿ ಅಧಿಕಾರಿ)**

**ಐಟಂ–6 ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ಅಧೀನದಲ್ಲಿರುವ ತೋಟಗಾರಿಕಾ ವಿಭಾಗದ ಫಲಶಾಸ್ತ್ರ ಕಟ್ಟಡವನ್ನು ನೆಲಸಮಗೊಳಿಸುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ತೋಟಗಾರಿಕಾ ವಿಭಾಗದ ಫಲಶಾಸ್ತ್ರ ಕಟ್ಟಡವನ್ನು (Pomology Section Building) ನೆಲಸಮಗೊಳಿಸಲು ವಿವರವಾದ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿ, ಪ್ರಮಾಣ ಪತ್ರ ಪಡೆದು ಮುಂದಿನ ಸಭೆಯಲ್ಲಿ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.

**(ಕ್ರಮ: ಆಸ್ತಿ ಅಧಿಕಾರಿ)**

**ಐಟಂ–7 ಕೃಷಿ ತಾಂತ್ರಿಕ ಮಹಾವಿದ್ಯಾಲಯ ಅಧೀನದಲ್ಲಿರುವ ಹಳೆಯ ಕೃಷಿ ಇಂಜಿನಿಯರಿಂಗ್ ಇನ್ಸಿಟ್ಯೂಟ್ ಕಟ್ಟಡವನ್ನು ನೆಲಸಮಗೊಳಿಸುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಹಳೆಯ ಕೃಷಿ ಇಂಜಿನಿಯರಿಂಗ್ ಇನ್ಸಿಟ್ಯೂಟ್ ಕಟ್ಟಡವನ್ನು ನೆಲಸಮಗೊಳಿಸಲು ವಿವರವಾದ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿ, ಪ್ರಮಾಣ ಪತ್ರ ಪಡೆದು ಮುಂದಿನ ಸಭೆಯಲ್ಲಿ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.

**(ಕ್ರಮ: ಆಸ್ತಿ ಅಧಿಕಾರಿ)**

**ಐಟಂ–8 ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣವನ್ನು ಇ–ಆಡಳಿತ ಇಲಾಖೆಯು ನಿಗದಿಪಡಿಸಿದ ನಿಯಮಾನುಸಾರ ಮತ್ತು ಕೆ.ಟಿ.ಪಿ.ಪಿ. ಕಾಯ್ದೆಯ ಪ್ರಕಾರ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| Sl. No. | Name of the item | Qty. | Amount (Rs. in lakh) |
|---|---|---|---|
| 1. | Laptops | 84 Nos. | 50.00 |
| 2. | Gas Chromatography with FID and ECD Detectors | 01 Set | 15.00 |

| | | | |
|---|---|---|---|
| 3. | LC-MSMS | 01 set | 98.00 |
| 4. | Advanced Audio Visual Systems in Main Campus Auditorium | 1 Set | 42.31 |
| 5. | Water soluble fertilizer (Urea-Phosphate, NPK: 17-44-00) | 40 Ton | 26.00 |

**(ಕ್ರಮ : ಸರಕು ಖರೀದಿ ಅಧಿಕಾರಿಗಳು)**

**ಐಟಂ–9** **ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಆವರಣದಲ್ಲಿ ಬೀಜ ಪರೀಕ್ಷಾ ಪ್ರಯೋಗಾಲಯ ಸ್ಥಾಪಿಸಲು ಖಾಲಿ ನಿವೇಶನ ಹಂಚಿಕೆ ಮಾಡಲು ಅನುಮತಿಸುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಆವರಣದಲ್ಲಿಯ ಜಾಗವನ್ನು ವಿಶ್ವವಿದ್ಯಾಲಯವು ಕಾಡಾ (Command Area Development Authority) ರವರಿಂದ 50 ವರ್ಷಗಳವರೆಗೆ ಗುತ್ತಿಗೆ ಕರಾರಿನ್ವಯ ಪಡೆದಿದ್ದು, 40 ವರ್ಷಗಳು ಕಳೆದಿದ್ದು, ಇನ್ನೂ 10 ವರ್ಷಗಳ ಕಾಲಾವಧಿ ಇರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ, ಬೆಂಗಳೂರು ಇವರ ಜೊತೆಗೆ ಉಪ–ಗುತ್ತಿಗೆ (ಸಬ್–ಲೀಸ್) ಮಾಡುವ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಿ, ಅಭಿಪ್ರಾಯ ಪಡೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಧರಿಸಿತು.

**(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು)**

**ಐಟಂ–10** **ಕೃವಿವಿ., ರಾಯಚೂರಿನ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯದ LC-MS/MS (8040) ಉಪಕರಣದ ಸಮಗ್ರ ನಿರ್ವಹಣೆ ಒಪ್ಪಂದ (CMC) ಕ್ಕಾಗಿ ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯಕ್ಕೆ ಖರೀದಿಸಲಾದ LC-MS/MS (8040) ಉಪಕರಣವನ್ನು ಸ್ಪಿಂಕೋಟೆಕ್ ಪ್ರೈವೇಟ್ ಲಿಮಿಟೆಡ್, ಚೆನ್ನೈ ಇವರಿಂದ ರೂ. 16,00,000 + ಜಿಎಸ್‌ಟಿ ಶೇ. 5 ಮೊತ್ತದಲ್ಲಿ 3 ವರ್ಷದವರೆಗೆ ಸಿ.ಎಂ.ಸಿ. ಮತ್ತು ಎಂ.ಎಸ್. ಉಪಕರಣಕ್ಕೆ 2 ವರ್ಷದವರೆಗೆ ಎ.ಎಂ.ಸಿ. ಪಡೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಸದರಿ ಸಭೆಯ ನಡವಳಿಗಳ ದೃಢೀಕರಣಕ್ಕೆ ನಿರೀಕ್ಷಿಸದೇ ಮುಂದಿನ ಕ್ರಮ ಕೈಗೊಳ್ಳಲು ಮಂಡಳಿಯು ತಿಳಿಸಿತು.

**(ಕ್ರಮ : ಮುಖ್ಯಸ್ಥರು, ಪಿ.ಆರ್.ಎಫ್.ಕ್ಯೂ. ಎ.ಎಲ್, ಕೃವಿವಿ., ರಾಯಚೂರು)**

**ಐಟಂ–11** **ಡಾ. ಸಿದ್ರಾಮ್, ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರ ಸಿ.ಎ.ಎಸ್.–2006 ಅಡಿ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಧನಸಹಾಯಕ ಆಯೋಗವು ತನ್ನ ಸಾರ್ವಜನಿಕ ನೋಟೀಸ್ ಸಂ.2 ((16–002–ps)-Pt-Fi-II) ರಲ್ಲಿ ನಿಗದಿತ ಅವಧಿಯಲ್ಲಿ ಕನಿಷ್ಠ ತರಬೇತಿಗಳನ್ನು ಪಡೆದಿರಬೇಕಾದ ವಿಷಯಕ್ಕೆ ವಿನಾಯತಿ ನೀಡಿದ್ದರಿಂದ ಸಿ.ಎ.ಎಸ್.–2006 ಅಡಿ ಡಾ. ಸಿದ್ರಾಮ್, ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡುವ ವಿಷಯವನ್ನು ಸರ್ಕಾರಕ್ಕೆ ಸಲ್ಲಿಸಿ, ಅಭಿಪ್ರಾಯ ಪಡೆದು ಮುಂದಿನ ವ್ಯವಸ್ಥಾಪನಾ ಮಂಡಳಿಯಲ್ಲಿ ಮಂಡಿಸಲು ಮಂಡಳಿಯು ನಿರ್ಣಯಿಸಿತು.

**(ಕ್ರಮ : ಕುಲಸಚಿವರು)**

| | |
|---|---|
| ಐಟಂ–12 | **ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಪ್ರಾಧ್ಯಾಪಕರನ್ನು ಹೆಚ್.ಎ.ಜಿ. ವೇತನ ಶ್ರೇಣಿಗೆ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸಿ.ಎ.ಎಸ್. 2006 (ಕರೀಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ–2006) ಯೋಜನೆಯಡಿ (ಕರ್ನಾಟಕ ರಾಜ್ಯ ಪತ್ರ ಭಾಗ 6–2, ದಿನಾಂಕ ಜುಲೈ–11, 2013) ಮತ್ತು ತಿದ್ದುಪಡಿ ಅಧಿಸೂಚನೆ (ಕರ್ನಾಟಕ ರಾಜ್ಯ ಪತ್ರ ಭಾಗ 6–ಸಿ, ದಿನಾಂಕ ಜೂನ್ 20, 2019) ಅನ್ವಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಪ್ರಾಧ್ಯಾಪಕರುಗಳಿಗೆ ಹಿರಿಯ ಪ್ರಾಧ್ಯಾಪಕರು/ ಹೆಚ್.ಎ.ಜಿ. ಎಂದು ಪದೋನ್ನತಿ ನೀಡುವ ವಿಷಯವನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಸಹಮತಿಯನ್ನು ಪಡೆದು ಮುಂದಿನ ವ್ಯವಸ್ಥಾಪನಾ ಮಂಡಳಿಯಲ್ಲಿ ಮಂಡಿಸಲು ಮಂಡಳಿಯು ನಿರ್ಣಯಿಸಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–13 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯನಲ್ಲಿ ಜ್ಯೂನಿಯರ್ ಟೆಕ್ನೀಶೀಯನ್ ಹುದ್ದೆಗೆ ನೇಮಕವಾಗಿರುವ ನೌಕರರ ವೇತನದಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸುವ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯನಲ್ಲಿ ಜ್ಯೂನಿಯರ್ ಟೆಕ್ನೀಶೀಯನ್ ಹುದ್ದೆಗೆ ನೇಮಕವಾಗಿರುವ ನೌಕರರ ವೇತನದಲ್ಲಿ ಆಗಿರುವ ತಾರತಮ್ಯಕ್ಕೆ ಕಾರಣರಾದ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ಈ ಕುರಿತಾದ ವಿವರವಾದ ಮಾಹಿತಿಯನ್ನೊಳಗೊಂಡ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–14 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಗ್ರಾಮೀಣ ಕೃಷಿ ಮೌಸಂ ಯೋಜನೆಯಡಿ ಗುತ್ತಿಗೆ ಆಧಾರದ ಮೇರೆಗೆ ತಾಂತ್ರಿಕ ಅಧಿಕಾರಿ / ಪರೀವೀಕ್ಷಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವರಿಗೆ ಕೇಂದ್ರೀಯ 7ನೇ ವೇತನ ಶ್ರೇಣಿ ಮಂಜೂರು ಮಾಡುವ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃವಿ.ವಿ., ರಾಯಚೂರಿನಲ್ಲಿ ಗ್ರಾಮೀಣ ಕೃಷಿ ಮೌಸಂ (ಐ.ಎಂ.ಡಿ.) ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇರೆಗೆ ತಾಂತ್ರಿಕ ಅಧಿಕಾರಿ ಮತ್ತು ಪರಿವೀಕ್ಷಕರೆಂದು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವಂತೆ 179 ದಿನಗಳ ಅವಧಿಗೆ ತೆಗೆದುಕೊಳ್ಳಲು ಹಾಗೂ ಸದರಿ ಸಿಬ್ಬಂದಿಗಳಿಗೆ 7$^{th}$ CPC ವೇತನ ಶ್ರೇಣಿಯ ಶಿಫಾರಸ್ಸಿನ ಅನ್ವಯ ಮೂಲ ವೇತನವನ್ನು ನಿಗದಿಪಡಿಸಲು ಮತ್ತು ವಾರ್ಷಿಕ ಮುಂಬಡ್ತಿಯನ್ನು ಹೊರತುಪಡಿಸಿ ಡಿ.ಎ. ಮತ್ತು ಹೆಚ್.ಆರ್.ಎ.ಗಳನ್ನು ವಿಸ್ತರಿಸಲು ವಿಷಯಕ್ಕೆ ಸರಕಾರದ ಅಭಿಪ್ರಾಯವನ್ನು ಪಡೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br><br>**(ಕ್ರಮ : ಕುಲಸಚಿವರು)** |
| ಐಟಂ–15 | **ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಹೊಸ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಸೇರಿಸಲು ಅನುಮತಿ ನೀಡುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಯಡಿಯಲ್ಲಿ ಈ ಕೆಳಕಂಡ ಹೊಸ ಕ್ಷೇಮಾಭಿವೃದ್ಧಿ ಯೋಜನೆಗಳನ್ನು ಸೇರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಅಲ್ಲದೇ ಈ ಕುರಿತು ಸೂಕ್ತ ಪ್ರಸ್ತಾವನೆಯನ್ನು ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಕೃಷಿ ಇಲಾಖೆಯ ಕಾರ್ಯದರ್ಶಿಯವರ ಮುಖಾಂತರ ಸಲ್ಲಿಸಲು ಸಭೆಯು ಸಲಹೆ ನೀಡಿತು. |

| Sl. no. | Particulars | No of Units | Budget required /unit ( in lakhs) | Total budget required (in lakhs) |
|---|---|---|---|---|
| 1. | **UASR SC/ST Scholarship for the Agriculture Graduates and Post Graduates** | | | |
| | Ph.D. Students having one year course work with two years research work in Agriculture @ Rs 10000/- month | 20 | 1.20 | 24.00 |
| | Post Graduate (PG) students having one year course work and one year research work in Agriculture @ Rs 7500/- month | 50 | 0.90 | 45.00 |
| | Under graduate (UG) students having 3½ years course work with six month Extension work in Agriculture | 230 | 0.60 | 138.00 |
| 2. | Purchase and distribution of books and other study materials related to course work for the UG/PG/Ph.D. students belonging to the SC/ST categories. | 300 | 0.30 | 90.00 |
| 3. | Establishment of personality development cum training centre for the SC/ST students of Agriculture graduates and post graduates in UAS Raichur (Building) | 01 | 81.00 | 81.00 |
| 4. | Zero Mess Bill facility to ICAR SC/ST students | 10 | 0.40 | 4.00 |
| | **Total** | | | **382.00** |

ಮುಂದುವರೆದು, ನಿರ್ದೇಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೋಶ, ಕೃವಿವಿ., ರಾಯಚೂರು ಇವರಿಗೆ ಹೊಸ ವಾಹನವನ್ನು ಖರೀದಿಸುವ ಪ್ರಸ್ತಾವನೆಗೆ ಹಾಗೂ ಕೃವಿವಿ., ರಾಯಚೂರಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕ್ರಿಕೇಟ್ ಟೂರ್ನಮೆಂಟ್ ಆಯೋಜಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆಯನ್ನು ನೀಡಿರುವುದಿಲ್ಲ.

**(ಕ್ರಮ : ನಿರ್ದೇಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೋಶ, ಕೃವಿವಿ., ರಾಯಚೂರು)**

**ಐಟಂ–16** **ಬೀಜ ಘಟಕ, ಕೃವಿವಿ., ರಾಯಚೂರಿನಲ್ಲಿ 2019–20ನೇ ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳಿಗೆ ಬೇಕಾಗುವ ಹಣಕಾಸಿನ ಅನುಮೋದನೆ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ರದ್ದೇವಾಡಗಿ ಕೃಷಿ ವಿಜ್ಞಾನ ಕೇಂದ್ರದಲ್ಲಿ 2019–20 ನೇ ಸಾಲಿನಲ್ಲಿ ವಿವಿಧ ಬೆಳೆಗಳ ಬೀಜೋತ್ಪಾದನಾ ಕಾರ್ಯಕ್ರಮಗಳನ್ನು ರೈತರ ಸಹಭಾಗಿತ್ವ ಯೋಜನೆಯಡಿ ಅನುಷ್ಠಾನಗೊಳಿಸಲು ತಗಲುವ ವೆಚ್ಚದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| ಕ್ರ. ಸಂ | ಹಣಕಾಸಿನ ಮೂಲ | ಪ್ರಮಾಣ (ಕ್ವಿಂ) | ಮೊತ್ತ (ರೂ. ಲಕ್ಷಗಳಲ್ಲಿ) | ಆವರ್ಥನಿಧಿ / ಎ.ಬಿ./ಎ.ಸಿ. ಸಂಖ್ಯೆ. |
|---|---|---|---|---|
| 1. | ಬೀಜ ಆವರ್ಥನಿಧಿ, ರದ್ದೇವಾಡಗಿ ಕೃಷಿ ವಿಜ್ಞಾನ ಕೇಂದ್ರ, ಕೃವಿವಿ, ರಾಯಚೂರು | 685 | 46.73 | ಆವರ್ಥನಿಧಿ |

| | | | | |
|---|---|---|---|---|
| 2. | ಬೀಜ ಆವರ್ಥನಿಧಿ, ರದ್ದೇವಾಡಗಿ ಕೃಷಿ ವಿಜ್ಞಾನ ಕೇಂದ್ರ, ಕೃವಿವಿ, ರಾಯಚೂರು | 115 | 6.90 | ಆವರ್ಥನಿಧಿ |
| | ಒಟ್ಟು : | 800 | 53.63 | |

**(ಕ್ರಮ : ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃವಿಕೇ. ರದ್ದೇವಾಡಗಿ)**

**ಐಟಂ–17** **ಕೃವಿವಿ., ಸಿಬ್ಬಂದಿಯವರ ರೂ. 1,00,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.**

**ಠರಾವು :**

ಮಾನ್ಯತೆ ಹೊಂದಿದ ಆಸ್ಪತ್ರೆಗಳಲ್ಲಿ ಈ ಕೆಳಕಂಡ ಸಿಬ್ಬಂದಿಯ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಠರಾಯಿಸಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ರಾಜೇಶ ತಂದೆ ಮೋದೇರಾಮ್ ಜಾನೀಟರ್, ಆಸ್ತಿ ವಿಭಾಗ, ಕೃವಿವಿ., ರಾಯಚೂರು. | 1,09,290.00 |

ಮುಂದುವರೆದು, ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಪಡೆದ ತುರ್ತು ಚಿಕಿತ್ಸೆಯ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ವೈದ್ಯಕೀಯ ಅಟೆಂಡೆನ್ಸ್ ನಿಯಮಾವಳಿಗಳನ್ವಯ ಪರಿಶೀಲಿಸಲು ಮತ್ತು ಮರುಪಾವತಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರ ಮೇಲುರುಜುಗಾಗಿ ಕಳುಹಿಸಲು ಹಾಗೂ ಮೇಲುರುಜುಗೊಂಡ ಪ್ರಸ್ತಾವನೆಗಳನ್ನು ಮುಂದಿನ ವ್ಯವಸ್ಥಾಪನಾ ಮಂಡಳಿಯ ಮುಂದೆ ಮಂಡಿಸಲು ಠರಾಯಿಸಿತು. ಅಲ್ಲದೇ ತುರ್ತು ಚಿಕಿತ್ಸಾ ಸಂಬಂಧಿತ ಬಿಲ್ಲುಗಳನ್ನು ಪರಿಗಣಿಸುವಲ್ಲಿ ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ವಿಶ್ವವಿದ್ಯಾಲಯದಿಂದ ಸುತ್ತೋಲೆ ಹೊರಡಿಸಲು ಸಭೆಯು ಸಲಹೆ ನೀಡಿತು.

**(ಕ್ರಮ: ಕುಲಸಚಿವರು / ಆಡಳಿತಾಧಿಕಾರಿಗಳು))**

**ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.**

**ಐಟಂ–1** **ಭಾರಿ ವಾಹನ ಚಾಲಕರಿಗೆ ಹೆಚ್ಚುವರಿ ಎರಡು ಮುಂಗಡ ಬಡ್ತಿ ಮಂಜೂರು ಮಾಡಲು ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃವಿವಿ., ರಾಯಚೂರಿನ ವೃಂದ ಮತ್ತು ನೇಮಕಾತಿ ನಿಯಮವಳಿಗಳಲ್ಲಿ ಭಾರಿ ವಾಹನ ಚಾಲಕರಿಗೆ ಹೆಚ್ಚುವರಿ ಎರಡು ಮುಂಗಡ ಬಡ್ತಿ ಮಂಜೂರು ಮಾಡಲು ಅವಕಾಶವಿಲ್ಲದಿರುವ ಪ್ರಯುಕ್ತ, ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅಭಿಪ್ರಾಯವನ್ನು ಪಡೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.

**(ಕ್ರಮ : ಆಡಳಿತಾಧಿಕಾರಿಗಳು)**

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 28–3–2020 | ಸಹಿ /– 28–3–2020 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.